ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,
ಕಡೂರು .

ಕ್ರಿಮಿನಲ್ ಪ್ರಕರಣ ಸಂಖ್ಯೆ-**1067/2024**

ಪಿರ್ಯಾದುದಾರರು - ವಿಶಾಲಕ್ಷ್ಮಮ್ಮ ಕೋಂ ಲೇಟ್ ಶಿವನಂಜಪ್ಪ, ಸುಮಾರು 70 ವರ್ಷ, ವ್ಯವಸಾಯ, ವಾಸ ಃ ಕುಪ್ಪಾಳು ಗ್ರಾಮ, ಮತಿಘಟ್ಟ ಅಂಚೆ, ಕಸಬಾ ಹೋಬಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿ ಅಣ್ಣಯ್ಯ ಬಿನ್ ಪೂಜಾರಪ್ಪ, ಸುಮಾರು 38 ವರ್ಷ, ವ್ಯವಸಾಯ, ವಾಸ ಃ ಡಿ.ಕಾರೇಹಳ್ಳಿ ಗ್ರಾಮ, ಕೇತುರಾಣಿ ಚೆನ್ನಮ್ಮ ಶಾಲೆ ಹತ್ತಿರ, ಬೋವಿ ಕಾಲೋನಿ, ದೇವನೂರು ಅಂಚೆ, ಸಖರಾಯಪಟ್ಟಣ ಹೋಬಳಿ, ಕಸಬಾ ಹೋಬಳಿ ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ

ಆಪಾದನೆ

ಈ ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದುದಾರರಿಗೆ ಪರಿಚಯಸ್ಥರಾಗಿದ್ದು, ಪಿರ್ಯಾದುದಾರರಿಂದ ಆರೋಪಿಯಾದ ನೀವು ಗೃಹಕೃತ್ಯದ ಉದ್ದೇಶಕ್ಕಾಗಿ ದಿನಾಂಕಃ 10.01.2024 ರಂದು ರೂ.2,30,000/- (ಎರಡು ಲಕ್ಷದ ಮುವತ್ತು ಸಾವಿರ) ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಪಾವತಿಗಾಗಿ ನಿಮ್ಮ ಖಾತೆ ಇರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕಡೂರು ಶಾಖೆಯ ಚೆಕ್ ಸಂಖ್ಯೆಃ 223369 ರಲ್ಲಿ ರೂ.2,30,000/-ಹಣವನ್ನು ಮತ್ತು ದಿನಾಂಕಃ 15.02.2024 ನ್ನು ನಮೂದಿಸಿ ನಗಧಿಕರಿಸಿಕೊಳ್ಳುವಂತೆ ಪಿರ್ಯಾದಿಗೆ ನೀಡಿದ್ದು, ಸದರಿ ಚೆಕ್ ಅನ್ನು ನಗದೀಕರಿಸಲು ಪಿರ್ಯಾದಿಯು ಬ್ಯಾಂಕ್ ಆಫ್ ಬರೋಡಾ, ಮತಿಘಟ್ಟ, ಶಾಖೆಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು "**Refer to drawer**" ಎಂಬ ಹಿಂಬರಹದೊಂದಿಗೆ ದಿನಾಂಕ-

23.02.2024 ರಂದು ಸದರಿ ಚೆಕ್ಕನ್ನು ಅಮಾನ್ಯ ಮಾಡಿದ್ದರಿಂದ, ಪಿರ್ಯಾದಿಯು ದಿನಾಂಕಃ 12.03.2024 ರಂದು ಆರೋಪಿಯಾದ ನಿಮಗೆ ನೋಟಿಸ್ ನ್ನು ಕಳುಹಿಸಿದ್ದು, ಸದರಿ ನೋಟೀಸ್ ಆರೋಪಿಗೆ ದಿನಾಂಕಃ19.03.2024 ರಂದು ಖುದ್ದು ಜಾರಿಯಾಗಿದ್ದರೂ ಸಹ, ಆರೋಪಿಯು ಇದುವರೆಗೂ ಯಾವುದೇ ವಿಧವಾದ ಹಣವನ್ನು ನೀಡಿರುವುದಿಲ್ಲ ಮತ್ತು ನೋಟೀಸಿಗೆ ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ಆರೋಪಿಯು ತನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ವಿಚಾರ ಗೊತ್ತಿದ್ದರೂ ಸಹ ಪಿರ್ಯಾದುದಾರರಿಗೆ ಚೆಕ್ಕನ್ನು ನೀಡಿ ಮೋಸ ಮಾಡಿದ್ದು, ಆ ಮೂಲಕ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ-138 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುವುದಾಗಿ ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಪ್ರಶ್ನೆ-1 - ಚೆಕ್ ನಿಮ್ಮ ಖಾತೆಗೆ ಸೇರಿದೆ ಎಂದು ನೀವು ಒಪ್ಪಿಕೊಳ್ಳುತ್ತೀರಾ ?

ಆರೋಪಿ ಉತ್ತರ - ಹೌದು

ಪ್ರಶ್ನೆ-2 - ಚೆಕ್ ನಲ್ಲಿರುವ ಸಹಿ ನಿಮ್ಮದೇ ಎಂದು ನೀವು ಒಪ್ಪಿಕೊಳ್ಳುತ್ತೀರಾ ?

ಆರೋಪಿ ಉತ್ತರ - ಹೌದು

ಪ್ರಶ್ನೆ-3 - ನೀವು ದೂರುದಾರರಿಗೆ ಈ ಚೆಕ್ ಅನ್ನು ನೀಡಿದ್ದೀರಾ ?

ಆರೋಪಿ ಉತ್ತರ - ಹೌದು

ಪ್ರಶ್ನೆ-4–ವಿತರಣೆಯ ಸಮಯದಲ್ಲಿ ನೀವು ದೂರುದಾರರಿಗೆ ಹಣ ನೀಡುವ ಹೊಣೆಗಾರಿಕೆಯನ್ನು ಹೊಂದಿದ್ದೀರಾ ಅಥವಾ ಇಲ್ಲಾ ?

ಆರೋಪಿ ಉತ್ತರ - ಇಲ್ಲ

ಪ್ರಶ್ನೆ-5–ನೀವು ಹೊಣೆಗಾರಿಕೆಯನ್ನು ನಿರಾಕರಿಸಿದರೆ ರಕ್ಷಣೆಯನ್ನು ಸ್ಪಷ್ಟವಾಗಿ ತಿಳಿಸಿ ?

ಎ)ಭದ್ರತೆಗಾಗಿ ಮಾತ್ರಃ ಚೀಟಿಯ ಭದ್ರತೆಗಾಗಿ ನೀಡಿದ್ದು
ಬಿ)ಸಾಲವನ್ನು ಈಗಾಗಲೇ ಮರುಪಾವತಿ ಮಾಡಲಾಗಿದೆಃ
ಸಿ)ಚೆಕ್ ನಲ್ಲಿ ಬದಲಾವಣೆಯಾಗಿದೆ/ದುರುಪಯೋಗವಾಗಿದೆ ಎಂದು ನಿರ್ದಿಷ್ಟಪಡಿಸಿಃ

ಡಿ)ಇತರೆ (ನಿರ್ದಿಷ್ಟಪಡಿಸಿಃ ಚೀಟಿಯ ಭದ್ರತೆಗಾಗಿ ಜಾಮೀನು ನೀಡಿದ್ದೆ.

ಆರೋಪಿ ಉತ್ತರ -

ಪ್ರಶ್ನೆ-6–ಈ ಹಂತದಲ್ಲಿ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ನೀವು ಬಯಸುವಿರಾ ?

ಆರೋಪಿ ಉತ್ತರ - ಪ್ರಯತ್ನಿಸುತ್ತೇನೆ

ಪ್ರಶ್ನೆ-7 - ಈ ಮೇಲೆ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ ?

ಆರೋಪಿ ಉತ್ತರ - ಹೌದು

ಪ್ರಶ್ನೆ-8 - ನೀವು ಆಪಾದನೆಯನ್ನು ಒಪ್ಪಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

ಆರೋಪಿ ಉತ್ತರ - ವಿಚಾರಣೆಯಾಗಲಿ

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 09.06.2026 ರಂದು ಸಹಿ ಮಾಡಿರುತ್ತಾರೆ)

-ಸಹಿ-

**(ನಳಿನ ಎಸ್.ಸಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ನ್ಯಾಯಾಲಯ,
ಕಡೂರು.

ಆರೋಪಿ ಸಹಿ -